ಮಾಲಿ. ಕಪಾಟಿನ ತುಂಬಾ ತರಾವರಿ ಸೀರೆಗಳು. ಮಂಗಳೂರಿಗೆ ಹೋಗಿ ಮಕ್ಕಳಿಗೆ, ತನಗೆ ಬಟ್ಟೆ ತರುವಾಗೆಲ್ಲಾ ಅಕ್ಕು ಪೂಜಾರ್ತಿಗೂ ತಪ್ಪದೆ ಸೀರೆ ತರುತ್ತಾಳೆ ಮಾಲಿ. ಮಡಿಕೆ ಬಿಚ್ಚದ ಎಷ್ಟೋ ಸೀರೆಗಳು ಹಾಗೇ ಇವೆ. ಹೊಸ ಸೀರೆ ಉಡುವ ಹುಮ್ಮಸ್ಸೇ ಇಲ್ಲ. ಆವತ್ತು ವರ್ಷಕ್ಕೋ, ಎರಡು ವರ್ಷಕ್ಕೋ. ಒಮ್ಮೆ ಗೋಪಾಲಣ್ಣನ ಅಂಗಡಿ ಒತ್ತರೆ ಮಾಡುವಾಗ ಮನೆಗೆ ಬರುತ್ತಿದ್ದ ಸೀರೆಗಳಲ್ಲಿ ಒಂದೆರಡನ್ನು ಮಾಂಕುವಿಗೂ ಕಾಣದೆ ತನ್ನ ಕೈಗಿಡುತ್ತಿದ್ದರು ಅಂತಕ್ಕ. ಮಾಂಕುವಿಗೂ ಅಂತಕ್ಕ ಉಟ್ಟು ಬಣ್ಣ ಮಾಸಿದ ಸೀರೆಗಳು ಇದ್ದೇ ಇರುತ್ತಿದ್ದವು. ಒಮ್ಮೆ ಅಂತಕ್ಕನ ಹಳೆ ಸೀರೆಗಳನ್ನು ಮಾಂಕುವಿಗೆ ಕೊಡಲು ಇಟ್ಟದ್ದರಲ್ಲಿ ನೇರಳೆ ಬಣ್ಣದ ಒಂದು ಸೀರೆ ತನಗೆ ಇಷ್ಟವಾಗಿ ಅವರಲ್ಲಿ ಅದನ್ನು ಕೇಳಿದರೆ, "ನಿಂಗೆ ಹಳೆ ಸೀರೆ ಬೇಡವೇ... ನಾನು ಅಂತದೇ ಬಣ್ಣ ಸಿಕ್ಕಿದ್ರೆ ನಿಂಗೆ ಕೊಡುವನೆ" ಅಂದಿದ್ರು. ತಾನು ಹುಸಿಮುನಿಸಿನಲಿ ಯಾಕೆಂದು ಕೇಳಿದರೆ, "ನನಗೆ ಮೊಲೆಹಾಲು ಕುಡಿಸಿದ್ದು ನಿನ್ನಮ್ಮ. ಆ ಲೆಕ್ಕದಲ್ಲಿ ನೀನು ನನ್ನ ತಂಗಿ... ಅದಕ್ಕೇ" ಎಂದು ನಕ್ಕು ತನ್ನ ಬಾಯಿ ಕಟ್ಟಿಸಿದ್ದರು. ಅಂತಕ್ಕ ಕೊಟ್ಟ ಆ ನೂಲಿನ ಸೀರೆಗಳನ್ನು ಉಡುವಾಗಿನ ಸಂಭ್ರಮ ಇವತ್ತು ಪಟ್ಟೆ ಸೀರೆ ಉಡುವಾಗಲೂ ಸಿಗುತ್ತಿಲ್ಲ ಯಾಕೆ? ಆ ಸೀರೆ ಉಡುವಾಗೆಲ್ಲಾ ಅಂತಕ್ಕನ ಮನಸ್ಸಿಗೆ ತಾನು ಹತ್ತಿರ ಅನ್ನುವ ಭಾವವೇ ತನಗೆ ಅಷ್ಟೊಂದು ಖುಷಿ ಕೊಡುತ್ತಿದ್ದದ್ದು? ಆಗಿರಬೇಕು. ಆದರೆ, ಆ ಪ್ರೀತಿಯನ್ನು ನಾನು ಉಳಿಸಿಕೊಂಡೆನೆ? ಎಲ್ಲೋ ಸಣ್ಣಗೆ ಎದೆಯಲ್ಲಿ ತಿವಿದ ಭಾವ! ಅಕ್ಕೂ ಪೂಜಾರ್ತಿ ಮತ್ತೆ ಈಸಿಚೇರಿಗೆ ಮೈಯೊರಗಿಸಿದರು.

ಬೈಲ ಗುತ್ತಿನ ಅಂತಕ್ಕ ಶೆಡ್ತಿಯ ಕಾಯಂ ಕೆಲಸದ ಹೆಣ್ಣು ಅಕ್ಕು ನಿಧ ನಿಧಾನಕ್ಕೆ ಅಕ್ಕು ಅಕ್ಕ ಆಗಿ ಆಮೇಲೆ ಅಕ್ಕು ಪೂಜಾರ್ತಿ ಆದದ್ದು ದೊಡ್ಡದೊಂದು ಕತೆ. ಅಂತಕ್ಕ ಶೆಡ್ತಿಯ ಅಮ್ಮನಿಗೆ ಅಂತಕ್ಕ ಒಬ್ಬಳೇ ಮಗಳಾದರೆ, ಅಕ್ಕುವಿನ ಅಮ್ಮ ದೇಯಿಗೆ ಹುಟ್ಟಿದ್ದರಲ್ಲಿ ನಾಲ್ಕನ್ನೂ ಮಣ್ಣಿಗಿಟ್ಟು ಉಳಿದದ್ದು ಒಂದು ಗಂಡು, ಒಂದು ಹೆಣ್ಣು. ಮಯ್ಯರ ಸಂಸ್ಕೃತ ಶಾಲೆಯಲ್ಲಿ ಮೂರನೇ ಕ್ಲಾಸು ಮುಗಿಸಿದ ಅಕ್ಕು ಅಮ್ಮನೊಂದಿಗೆ ಗುತ್ತಿನ ಮನೆ ಕೆಲಸಕ್ಕೆ ಅಂತ ಹೋದರೂ, ಕೆಲಸ ಮಾಡಿದ್ದಕ್ಕಿಂತ ಹೆಚ್ಚಾಗಿ ತನಗಿಂತ ನಾಲ್ಕಯ್ದು ವರ್ಷ ಹಿರಿಯಳಾದ ಅಂತಕ್ಕನೊಂದಿಗೆ ಕಾಡು, ಬೈಲು ಸುತ್ತಿದ್ದೆ ಹೆಚ್ಚು. ಎದೆ ಹಾಲಿಲ್ಲದ ತನ್ನ ಮಗಳಿಗೆ ಮೊಲೆಯೂಡಿಸಿದವಳ ಮಗಳು ಎಂಬ ರೀತಿಯಲ್ಲಿ ಅಂತಕ್ಕನ ಅಮ್ಮನಿಗೂ ಇವಳಲ್ಲಿ ಚೂರು ಕೊಂಗಾಟ ಜಾಸ್ತಿಯೇ. ಮುಂದೆ ಅಂತಕ್ಕನ ಮದುವೆ ಆಗಿ ಗೋಪಾಲಣ್ಣ ಮನೆ ಅಳಿಯನಾಗಿ ಬಂದ ಮೇಲೂ ಇಬ್ಬರ ದೋಸ್ತಿ ಏನೂ ಕಡಿಮೆ ಆಗಿರಲಿಲ್ಲ. ಅಕ್ಕುವನ್ನು ಬೆದ್ರಕ್ಕೆ ಮದುವೆ ಮಾಡುವ ವಿಚಾರ ಬಂದಾಗಲೂ ಅಷ್ಟು ದೂರ ಅವಳನ್ನು ಕಳಿಸುವುದು ಅಂತಕ್ಕನಿಗೆ ಚೂರೂ ಇಷ್ಟವಿರಲಿಲ್ಲ. ಆದರೆ, ಬೇಕಷ್ಟು ಗದ್ದೆ, ತೋಟದೊಂದಿಗೆ ಸೇಂದಿ ವ್ಯಾಪಾರ ಕೂಡ ಇರುವವರು. ಅಕ್ಕುವಿಗೆ ಏನೂ ಮೋಸ ಇಲ್ಲ ಎಂಬುದನ್ನು ದೇಯಿ ಒತ್ತಿ ಒತ್ತಿ ಹೇಳಿದ್ದರಿಂದ ಅಂತಕ್ಕನೂ ತಲೆ ಆಡಿಸಿದ್ದರು. ಹೆಣ್ಣೊಪ್ಪಿಸಿ ಕೊಡುವಾಗ ದೇಯಿಗಿಂತ ಹೆಚ್ಚಾಗಿ ಕೂಗಿದ್ದೂ ಅಂತಕ್ಕನೆ.

ದೇಯಿ ಹೇಳಿದ ಹಾಗೆ ಬೆದ್ರದ ಮನೆಯಲ್ಲಿ ಏನೂ ಮೋಸ ಇರಲಿಲ್ಲ. ಗಂಡನ ಪ್ರೀತಿ ಒಂದು ಬಿಟ್ಟು! ದೊಡ್ಡ ಮನೆ, ಸುತ್ತ ತಮ್ಮದೇ ಬೈಲು, ತೋಟ, ಹಾಡಿ. ಪಾಪದ ಅತ್ತೆ ಮಾವ. ಅತ್ತಿಗೆ ಅಂದರೆ ಜೀವ ಬಿಡುವ ಮೈದುನರು. ಆದರೆ, ಗಂಡನೋ ಸಾಕ್ಷಾತ್ ದೂರ್ವಾಸ! ಅವನಿಗೆ ಯಾವಾಗ ಯಾಕೆ ಸಿಟ್ಟು ಬರುತ್ತದೆಂದು ಅವನಿಗೇ ಗೊತ್ತಾಗುತ್ತಿರಲಿಲ್ಲ. ಸಿಟ್ಟು ಬಂದರೆ ಕೈಗೆ ಸಿಕ್ಕಿದ್ದನ್ನು ತೆಗೆದು ಬಡಿಯುವ ಅವನ ಕೋಪಕ್ಕೆ ತಂದೆ ತಾಯಿಯೇ ಹೆದರಿ ನಡುಗುತ್ತಿದ್ದರು. ಸೇಂದಿ ವ್ಯಾಪಾರ ಮುಗಿಸಿ ಅರ್ಧರಾತ್ರಿ ಮನೆಗೆ ತಲುಪುವವ ಬೇಕಿದ್ದರೆ ಅವಳನ್ನು ತೆಕ್ಕೆಗೆಳೆಯುವ. ಒಂದು ಮಾತಿಲ್ಲ, ಕತೆ ಇಲ್ಲ. ಒಂದು ಚೂರು ಆಚೆ ಈಚೆ ಆಯ್ತೋ ಕೈಗೆ ಸಿಕ್ಕಿದ್ದರಲ್ಲಿ ಬಡಿತ. ಸಹಿಸಿ ಸಹಿಸಿ ಸಾಕಾದ ಅಕ್ಕು ಮೂರು ತಿಂಗಳಲ್ಲೇ ಅರೆಜೀವ ಆಗಿದ್ದಳು. ಆಟಿ ತಿಂಗಳಲ್ಲಿ ಮಗಳನ್ನು ಕರೆದೊಯ್ಯಲು ಬಂದ ದೇಯಿ ಮತ್ತು ಚನಿಯರಿಗೆ ಮಗಳ ಕೋಲ ನೋಡಿದ ಕೂಡಲೇ ಏನೂ ನೇರ್ಪ ಇಲ್ಲ ಅನ್ನುವುದು ತಿಳಿದು ಹೋಗಿತ್ತು.